ಶ್ರೀ ಕಡಿದಾಳ್ ಮಂಜಪ್ಪ.—ಅಪೇಕ್ಷೆ ಮಾಡಬೇಕು ಇದ್ದರೂ ಪ್ರಯೋಜನ ಹೊಂದಿದ್ದಾರೆ.

ಶ್ರೀ ಮಾಲಿ ಮರಿಯಪ್ಪ.—ಸೆಂಟ್ರಲ್ ಫ್ಯಾಮಿಲಿ ರಿಲೀಫ್ ಕಮಿಟಿಯಲ್ಲಿ ಡಿಸ್ಟ್ರೆಸ್ ಪ್ರದೇಶಗಳಲ್ಲಿ desilt ಮಾಡಿದ್ದಕ್ಕೆ ಕಂಟಿಬ್ಯೂಷನ್ ಕೊಡಬೇಕೆಂದು ಒತ್ತಾಯಮಾಡಬೇಕಾಗಿಲ್ಲವೆಂದು ಹೇಳಿದ್ದಾರೆ, ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಂಟ್ರಿಬ್ಯೂಷನ್ ಕೊಡಕೂಡದೆಂದು ತೀರ್ಮಾನಮಾಡಲಿಲ್ಲ. It depends upon the circumstances of each case.

ಶ್ರೀ ಮಾಲಿ ಮರಿಯಪ್ಪ.—'Circumstances' ಎಂದರೆ ಏನು ?

ಶ್ರೀ ಕಡಿದಾಳ್ ಮಂಜಪ್ಪ.—ಅಂದರೆ, ರೈತರ ability to pay, ಮತ್ತು desilt ಮಾಡಿದ್ದರಿಂದ ರೈತರಿಗಾಗಿರತಕ್ಕ ಪ್ರಯೋಜನ ಇವುಗಳನ್ನು ಗಣನೆಗೆ ತೆಗೆದುಕೊಂಡು ಆಯಾ ಸಂದರ್ಭಾನುಸಾರ ತೀರ್ಮಾನಮಾಡಬೇಕಾಗುತ್ತದೆ.

ಶ್ರೀ ಮಾಲಿ ಮರಿಯಪ್ಪ.—ಹಾಗಾದರೆ ಯಾವ ಯಾವ ಸ್ಥಳಗಳಲ್ಲಿ ರೈತರ ability ಮತ್ತು ಅಲ್ಲಿ ಆಗಿರತಕ್ಕ ಪ್ರಯೋಜನವನ್ನು ಗಮನದಲ್ಲಿಟ್ಟುಕೊಂಡು ಕಂಟಿಬ್ಯೂಷನ್ ಹಾಕಿದ್ದೀರೆಂಬುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ, ಮಾಡುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಅಲ್ಲಿ ಡೀ-ಸಿಲ್ಟ್ ಮಾಡುವುದಕ್ಕೆ ಹೊರಟಾಗ ಡಿಸ್ಟ್ರೆಸ್ ಪ್ರದೇಶಗಳಲ್ಲಿ ಜನರಿಗೆ ಕೆಲಸವನ್ನು ಒದಗಿಸಬೇಕೆಂದು ತಾನೆ ತಾವು ಪ್ರಾರಂಭಮಾಡಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಅದೇ ಉದ್ದೇಶ.

ಶ್ರೀ ಬಿ. ಸಿ. ನಂಜುಂಡಯ್ಯ.—ಅಚ್ಚುಕಟ್ಟು ದಾರರ ಒಪ್ಪಿಗೆ ಇಲ್ಲದೆ ಹೀಗೆ ಡೀ-ಸಿಲ್ಟ್ ಮಾಡಿದ್ದರೂ ಅವರನ್ನು ಕಂಟ್ರಿಬ್ಯೂಷನ್ ಕೊಡಬೇಕೆಂದು ಕೇಳುವುದು ಅನ್ಯಾಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಡೀಸಿಲ್ಟ್ ಮಾಡುವ ಅವಶ್ಯಕತೆಯಿದ್ದು, ಅದರಂತೆ ಡೀಸಿಲ್ಟ್ ಮಾಡಿಸಿ, ಅಚ್ಚುಕಟ್ಟುದಾರರು ಹೆಚ್ಚಿಗೆ ಪ್ರಯೋಜನ ಹೊಂದಿದ್ದರೆ ಅವರು ಕಂಟ್ರಿಬ್ಯೂಷನ್ ಕೊಡುವುದು ನ್ಯಾಯವೆಂದು ಸರ್ಕಾರದವರ ಅಭಿಪ್ರಾಯ.

ಶ್ರೀ ಬಿ. ಸಿ. ನಂಜುಂಡಯ್ಯ.—ಹಾಗಿದ್ದರೂ, ಈಗ ಸಾರ್ವತ್ರಿಕವಾಗಿ ಎಲ್ಲಾ ಕಡೆಯಲ್ಲೂ ಈ ಕಂಟ್ರಿಬ್ಯೂಷನ್ ವಸೂಲು ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದುವರೆಗೂ ನಾವು ಎಲ್ಲಾ ಕಡೆಯಲ್ಲೂ ಕಡ್ಡಾಯವಾಗಿ ಕಂಟ್ರಿಬ್ಯೂಷನ್ ಕೊಡಬೇಕೆಂದು ಹೇಳಿ ಒತ್ತಾಯ ಮಾಡಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಅಪಾರವಾದ ಅನುಕೂಲ ಇದರಿಂದ ರೈತರು ಪಡೆದಿದ್ದರೆ ಅಂಥ ಕಡೆಗಳಲ್ಲಿ ಅಚ್ಚುಕಟ್ಟು ದಾರರು ಕಂಟ್ರಿಬ್ಯೂಷನ್ ಕೊಡುವುದು ನ್ಯಾಯವಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಆದರೆ, ಸಾರ್ವತ್ರಿಕವಾಗಿ ವಸೂಲುಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಗಮನಕ್ಕೆ ಬಂದಿಲ್ಲ ; ವಿಚಾರ ಮಾಡುತ್ತೇವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹೋದ ವರ್ಷ ಯಾವ ಯಾವ ಕೆರೆಗಳನ್ನು ಡೀ-ಸಿಲ್ಟ್ ಮಾಡಿತೋ ಆ ಕೆರೆಗಳನ್ನು ಈಗ ಡೀ-ಸಿಲ್ಟ್ ಮಾಡಲಾಗುತ್ತದೆಯೆಂದು ಹೇಳಿ enquiry ನಡೆಸುವುದಾಗಿ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಮಾಡುತ್ತೇನೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಕಾನೂನು ಪ್ರಕಾರ ಹೀಗೆ ಕೇಳುವುದಕ್ಕೆ ಅವಕಾಶವಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಅವಕಾಶವಿದ್ದರೆ ವಸೂಲುಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಈ ಹಣದಲ್ಲಿ, ರಫ್ಯೂಗೋಧಿ ಮುಫತ್ತಾಗಿ ಬಂದಿದ್ದನ್ನೂ ಹಂಚಿದ್ದನ್ನೂ ಸೇರಿಸಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಸೇರಿಸಿದೆ.

ಶ್ರೀ ಬಿ. ಹುಚ್ಚೇಗೌಡ.—ಹೀಗಿರುವಾಗ, ತಾವು ಕೆಲವು ಸಂದರ್ಭಗಳಲ್ಲಿ ಕಂಟ್ರಿಬ್ಯೂಷನ್ ವಿಧಿಸಿ discrimination ಮಾಡಿದರೆ ಸರಿಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾವು ಕಂಟಿಬ್ಯೂಷನ್ನನ್ನು ಸಾಮಾನ್ಯವಾಗಿ ಕೇಳುತ್ತಿಲ್ಲ. ಎಲ್ಲೆಲ್ಲಿ ಸರ್ಕಾರದ ಹಣವನ್ನು ಉಪಯೋಗಿಸಿ ಡೀಸಿಲ್ಟ್ ಮಾಡಿಸಿಕೊಟ್ಟು ರೈತರಿಗೆ ಹೆಚ್ಚಿನ ಪ್ರಯೋಜನ ಲಭಿಸುವಂತೆ ಮಾಡಿದೆಯೋ ಮತ್ತು ಎಲ್ಲಿ ರೈತರಿಗೆ ಕೊಡತಕ್ಕ ಶಕ್ತಿಯಿದೆಯೋ ಅಂಥ ಸಂದರ್ಭಗಳಲ್ಲಿ ಕಂಟ್ರಿಬ್ಯೂಷನ್ ಕೊಡಿ ಎಂದು ಕೇಳುವುದು ನ್ಯಾಯವೆಂದು ತಿಳಿದಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಮುಚ್ಚಳಿಕೆ ಏನೂ ರೈತರಿಂದ ಬರೆಸಿಕೊಳ್ಳದಿದ್ದರೂ ವಸೂಲು ಮಾಡುತ್ತೀರಾ ?

(No answer.)

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಇದರಲ್ಲಿ ಎಷ್ಟೋ ಭಾರಿ ಭಾರಿ ಕೆರೆ ಕಾಮಗಾರಿಗಳನ್ನು ರೆಡ್ ಕ್ರಾಸ್ ನಿಧಿ ಬಾಬಿನಿಂದ ಮಾಡಿದೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಭಾಗವಲ್ಲ ; ಸರ್ಕಾರದ ಹಣದಿಂದಲೇ ಬಹಳ ಭಾಗ ಆಗಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ರೆಡ್ ಕ್ರಾಸ್ ಹಣದಿಂದ ಮಾಡಿಸಿದ್ದರೆ, ಅವುಗಳ ವಿಷಯದಲ್ಲಿ ಕಂಟ್ರಿಬ್ಯೂಷನ್ ವಜಾಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆಮಾಡುತ್ತೇವೆ. ಸಾಮಾನ್ಯವಾಗಿ ಕಂಟ್ರಿಬ್ಯೂಷನ್ ವಸೂಲು ಮಾಡಲೇ ಇಲ್ಲ. ಕೆಲವು ಸಂದರ್ಭಗಳಲ್ಲಿ ವಿಧಿಸಬೇಕೆಂದು ಯೋಚನೆಮಾಡುತ್ತಿದ್ದೇವೆ. ನಿಮ್ಮ ತಾಲ್ಲೂಕೂ ಯೋಚನೆ ಮಾಡಬೇಕಾದದ್ದೇ (ನಗು).

Supply of Electricity from Begur to Kibbahalli and Therakanambi for Agricultural purposes.

Q.—614. Sri H. K. SHIVARUDRAPPA (Gundlupet—Heggaddevanakote).—

Will the Government be pleased to state :—

(*a*) whether the people have requested for the supply of electricity

from Begur in Gundlupet Taluk to Kibbahalli and from Kibbahalli to Therakanambi, for agricultural purposes;

(*b*) if so, when; the number of people that have requested and the total horse power requested?

A.—Dr. R. NAGAN GOWDA (Minister for Agriculture).—

(*a*) Yes.

(*b*) There are 2 sets of requisitions for power supply from 2 groups of villages as under:—

(1) Power supply for 21 Irrigation Pump Sets in Madagur, Belachavadi, Therakanambi-hundi and Therakanambi villages. Total Horse Power—145. This requisition for power supply was made during the second week of November 1953.

(2) Power supply for 18 Irrigation Pump sets at Kibbahalli, Sampagepura and Madagur in Gundlupet Taluk. Total Horse Power—120. The requisition was made during the last week of October 1953.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಐಟಂ ನಂಬರ್ ಒಂದರಲ್ಲಿ ಹೇಳಿರತಕ್ಕ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು ತಗಲುವ ಅಂದಾಜು ಮೊಬಲ ಗೆಷ್ಟು?

ಡಾ॥ ಆರ್. ನಾಗನಗೌಡ.— ಆ ಅಂದಾಜಿಗ ಳಿನ್ನೂ ತಯಾರಾಗಿರುವುದಿಲ್ಲ. ಇನ್ನು ಸ್ವಲ್ಪ ದಿನ ಗಳಲ್ಲೇ ತಯಾರಾಗಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಎರಡರ ಪೈಕಿ ಯಾವುದಕ್ಕೂ ಅಂದಾಜು ತಯಾರಾಗಿಲ್ಲವೇ?

ಡಾ॥ ಆರ್. ನಾಗನಗೌಡ.—ಆಗಿಲ್ಲ.

Five-Year Plan.

Q.—7. Sri H. C. LINGA REDDY (Malur).—

Will the Government be pleased to state:—

(*a*) when the Five-Year Plan was introduced in the State;

(*b*) the number of schemes the State Government has been so far able to implement under the plan;

(*c*) the total amount spent so far on the various schemes;

(*d*) the extent of Central aid;

(*e*) whether they hope to put into execution all the schemes under the plan within the plan period?

A.—Sri K. HANUMANTHAIYA (Chief Minister).—

(*a*) 1951-52

(*b*) 145 schemes.

(*c*)

		Rs.
1951-52	...	516·57 lakhs.
1952 53	...	599·23 ,,
1953 54 (to end of August 1953)		222·37 ,,
		1,·38·17 ,,
Schemes of Mysore Iron and Steel Works to end of October 1953.		254.91 ,,

(*d*) Total Central assistance included in State Plan is Rs. 8 crores for schemes under the State Five-Year Plan. Central assistance received so far is Rs. 70·96 lakhs for schemes under the State Five Year Plan and Rs. 112·48 lakhs for Iron and Steel Works (All India Plan). A special loan of Rs. 3½ crores has been sanctioned by the Government of India for the speedy execution of Bhadra and Nugu Reservoirs.

(*e*) Yes.

Sri H. C. LINGA REDDY.—Are the Government aware that the Planning Commission have revised their plan?

Sri K. HANUMANTHAIYA.—Yes.

Sri H. C. LINGA REDDY.—In the light of the revised plan, what is the amount that the Central Government give for the execution of various works?

Sri K. HANUMANTHAIYA.—The answer is given. Out of the revision, we have got Rs. 3 crores for Bhadra Reservoir and Rs. 50 lakhs for Nugu Reservoir.

Sri H. C. LINGA REDDY.—Shall I take it that about Rs. 4 crores more will be added on to the amount that has already been fixed?

Mr. SPEAKER.—Any other question? When he says Rs. 3½ crores, you take it at Rs. 4 crores!

Sri H. C. LINGA REDDY.—Considering the time that has elapsed, is it not true that the progress made with regard to Five-Year Plan is very slow, Sir?

Sri K. HANUMANTHAIYA.—No, Sir.